## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಜಿಡಿ\2459\2015\ಸನಿಕಾಸ-2
DRE-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 4.11.2016

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ**

**ವಿಷಯ:** ಸರ್ಕಾರಿ ನೌಕರರಾದ ಶ್ರೀ.ಎಂ.ಮದನಗೋಪಾಲ್, ನಿವೃತ್ತ, ಆರ್.ಟಿ.ಓ., ಸಾರಿಗೆ ಇಲಾಖೆ, ತುಮಕೂರು (2) ಶ್ರೀ.ಎಲ್.ಲಿಂಗರಾಜು, ಆರ್.ಟಿ.ಓ., ಸಾರಿಗೆ ಇಲಾಖೆ, ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು (3) ಶ್ರೀ.ಸಿ.ಟಿ.ಮೂರ್ತಿ, ಆರ್.ಟಿ.ಓ., ರಾಜಾಜಿನಗರ ಬೆಂಗಳೂರು ರವರು ಕರ್ತವ್ಯ ಲೋಪ/ದುರ್ವರ್ತನೆ ಎಸಗಿರುವ ಬಗ್ಗೆ.

*******

ಶ್ರೀ.ಶಾಮಣ್ಣ, ಪಿ.ಬಿ. ನಂ:156, ಆಶೋಕನಗರ, ತುಮಕೂರು ಜಿಲ್ಲೆ ತುಮಕೂರು (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಶ್ರೀ.ಎಂ.ಮದನಗೋಪಾಲ್, ನಿವೃತ್ತ, ಆರ್.ಟಿ.ಓ., ಸಾರಿಗೆ ಇಲಾಖೆ, ತುಮಕೂರು (2) ಶ್ರೀ.ಎಲ್.ಲಿಂಗರಾಜು, ಆರ್.ಟಿ.ಓ., ಸಾರಿಗೆ ಇಲಾಖೆ, ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು (3) ಶ್ರೀ.ಸಿ.ಟಿ.ಮೂರ್ತಿ, ಆರ್.ಟಿ.ಓ., ರಾಜಾಜಿನಗರ ಬೆಂಗಳೂರು (ಇನ್ನು ಮುಂದೆ "ಎದುರುದಾರ 1, 2 ಮತ್ತು 3" ಎಂದು ಕ್ರಮವಾಗಿ ಕರೆಯಲ್ಪಡುತ್ತಾರೆ) ರವರ ವಿರುದ್ಧ ಅಧಿಕಾರ ದುರುಪಯೋಗ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ತುಮಕೂರು, ನೆಲಮಂಗಲ ಹಾಗೂ ರಾಜಾಜಿನಗರ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ತಮ್ಮ ಕಛೇರಿಗಳ ಪಕ್ಕದಲ್ಲೇ ರಾಷ್ಟ್ರೀಯ ಹೆದ್ದಾರಿ ಇದ್ದು ಇಲ್ಲಿ ಖಾಸಗಿ ಬಸ್ ನವರಿಂದ ಅನಧಿಕೃತವಾಗಿ, ಅಕ್ರಮವಾಗಿ ಚಾಲನೆ ಮಾಡಲು ಲಂಚ ಪಡೆದು ಸಹಕರಿಸುತ್ತಿದ್ದಾರೆ. ಸುಮಾರು 2000ಕ್ಕೂ ಅಧಿಕ ಖಾಸಗಿ ಬಸ್‌ಗಳು ಪರವಾನಗೆ

ಪಡೆಯದೆ ಸಂಚರಿಸುತ್ತಿದ್ದು ಇದರಿಂದ ಮುಗ್ಧ ಪ್ರಯಾಣಿಕರು ಅಪಘಾತದಂತಹ ಅವಗಹಡುಗಳು ಸಂಭವಿಸಿದರೆ ಯಾವುದೇ ಇರ್ಮೆ ಸೌಲಭ್ಯಗಳು ದೊರಕದಂತಾಗಿ ನಷ್ಟಗಳನ್ನು ಅನುಭವಿಸುತ್ತಿದ್ದಾರೆ. ಅಲ್ಲದೆ ರಾಜ್ಯ ಸಾರಿಗೆ ಇಲಾಖೆಗೆ ಇದರಿಂದ ನಷ್ಟ ಉಂಟಾಗುತ್ತಿದ್ದೆ. ಆದ್ದರಿಂದ ಇದನ್ನು ತಡೆಗಟ್ಟಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ವಿನಂತಿಸಿದ್ದಾರೆ.

3. ಸದರಿ ದೂರಿನ ಮೇಲೆ 1ನೇ ಎದುರುದಾರರಿಂದ ಆಕ್ಷೇಪಣೆಯನ್ನು ಕೋರಿದ್ದು, 1ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಯಲ್ಲಿ ಎದುರುದಾರ-1 ರವರು ದೂರುದಾರರು ತಮ್ಮ ದೂರಿಗೆ ಅನುಸಾರವಾಗಿ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ, ಅನಧಿಕೃತವಾಗಿ ಚಲಿಸುವ ವಾಹನಗಳ ಪಟ್ಟಿಯನ್ನು ನೀಡಿರುವುದಿಲ್ಲ. ತಮ್ಮ ಕಛೇರಿಯಿಂದ 364 ವಾಹಗಳಿಗೆ ಯಾವುದೇ ಪರವಾನಗಿ ನೀಡಿರುವುದಿಲ್ಲ ಅದುಅಲ್ಲದೆ ತಾವು ಇತ್ತೀಚೆಗೆ ಈ ಹುದ್ದೆಯನ್ನು ವಹಿಸಿಕೊಂಡಿದ್ದು, ದೂರುದಾರರು ಆಪಾದಿಸಿರುವ ದೂರಿಗೆ ವಿವರವಾದ ಉತ್ತರ ನೀಡಲು 2 ತಿಂಗಳ ಕಾಲಾವಕಾಶವನ್ನು ಕೇಳಿಕೊಂಡಿದ್ದಾರೆ.

4. ಆಪ್ರಕಾರ ಎದುರುದಾರರ-1 ರವರು ದಿ: 20.11.2015ರಂದು ತಮ್ಮ ಆಕ್ಷೇಪಣೆಯಲ್ಲಿ ಎದುರುದಾರರು ಯಾವುದೇ ಸಂಪೂರ್ಣ ಮಾಹಿತಿ ಪಡೆಯದೆ ಸುಳ್ಳು ಫೀರ್ಯಾದಿ ದಾಖಲಿಸಿದ್ದಾರೆ. ಆದರೆ ತಮ್ಮ ಇಲಾಖೆ 2014-15ನೇ ಸಾಲಿನಲ್ಲಿ 24 ವಾಹನಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಿಕೊಂಡು, 2013-14ನೇ ಸಾಲಿನಲ್ಲಿ 54 ವಾಹನಗಳನ್ನು ತಪಾಸಣೆ ಮಾಡಲಾಗಿದೆ. ದಿ: 4.3.2014 ರಂದು ಆರ್.ಟಿ.ಓ., ತುಮಕೂರು ರವರು 18 ವಾಹನಗಳ ಪರವಾನಿಗೆಯನ್ನು ರದ್ದು ಗೊಳಿಸಿದ್ದಾರೆ. 49 ವಾಹನಗಳಿಗೆ ದಂಡವನ್ನು ವಿಧಿಸಲಾಗಿದೆ. ಅಲ್ಲದೆ ತಮ್ಮ ಇಲಾಖೆಯಲ್ಲಿ ಅನೇಕ ಹುದ್ದೆಗಳು ಕಾಲಿ ಇದ್ದು ಆರ್.ಟಿ.ಓ., ತುಮಕೂರು ರವರ ಅಡಿಯಲ್ಲಿ 11 ಜನ ಮೋಟರ್ ವಾಹನ ತಪಾಸಣಾಧಿಕಾರಿಗಳ ಬದಲಿಗೆ ಕೇವಲ 3 ಜನರು ಮಾತ್ರ ಕೆಲಸ ನಿರ್ವಹಿಸುತ್ತಿದ್ದಾರೆ.

ಅಲ್ಲದೆ ಅತಿದಟ್ಟನೆಯ ವಾಹನಗಳ ಸಂಚಾರವನ್ನು ಕೇವಲ ಕೆಲವೇ ಸಿಬ್ಬಂದಿಗಳಿಂದ ನಿರ್ವಹಿಸಲು ಅಸಾಧ್ಯವಾಗಿರುತ್ತದೆ. ಆದ್ದರಿಂದ ನಮ್ಮ ಕಛೇರಿಯ ಅಧಿಕಾರಿಗಳು ಯಾವುದೇ ಭ್ರಷ್ಟಾಚಾರದಲ್ಲಿ ತೊಡಗಿರುವುದಿಲ್ಲ, ಅನಧಿಕೃತ ವಾಹನಗಳ ಸಂಚಾರಕ್ಕೆ ಆಸ್ಪದ ಕೊಟ್ಟಿಲ್ಲವೆಂದು ತಿಳಿಸುತ್ತಾ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೊರಿಕೊಂಡಿದ್ದಾರೆ.

5. ಎದುರುದಾರ–2ರವರು ತಮ್ಮ ಆಕ್ಷೇಪಣೆಯಲ್ಲಿ ಯಾವುದೇ ಬಸ್‌ನ ರಹದಾರಿ ಪರವಾನಿಗೆ ನೀಡಲು, ಕ್ರಮ ಜರುಗಿಸಲು ತಮ್ಮ ಕಛೇರಿಗೆ ಅಧಿಕಾರ ಇರುವುದಿಲ್ಲ. ರಹದಾರಿ ಪರವಾನಿಗೆ ಮೇಲೆ ಕ್ರಮ ಜರುಗಿಸಲು ತುಮಕೂರು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ವ್ಯಾಪ್ತಿಗೆ ಓಳಪಡುತ್ತದೆ. ತಮ್ಮ ಕಛೇರಿ ಮಾರ್ಗ ಮಧ್ಯದಲ್ಲಿ ಇರುವುದರಿಂದ ತಮಗೆ ಈ ಅಧಿಕಾರ ಇರುವುದಿಲ್ಲ. ತಾವು ಕಾಲಕಾಲಕ್ಕೆ ಬಸ್‌ನ ತನಿಖಾ ವರದಿಯನ್ನು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಕ್ರಮ ಜರುಗಿಸಲು ಕಳುಹಿಸಲಾಗಿದೆ. ತಾವು ಪ್ರವರ್ತನ ಕಾರ್ಯಾಕ್ಕೆ ಹೆಚ್ಚು ಗಮನ ಕೊಡುವುದಾಗಿ ಕೇಳಿಕೊಂಡಿದ್ದಾರೆ.

6. ಎದುರುದಾರ–3 ರವರು ತಮ್ಮ ಆಕ್ಷೇಪಣೆಯಲ್ಲಿ 2ನೇ ಎದುರುದಾರರು ಯಾವ ತರಹದ ಕಾನೂನು ಉಲ್ಲಂಘನೆ ಮಾಡಿರುತ್ತಾರೆ ಎಂಬ ಬಗ್ಗೆ ದೂರಿನಲ್ಲಿ ಯಾವುದೇ ನಿರ್ದಿಷ್ಟ ಉಲ್ಲೇಖವಿರುವುದಿಲ್ಲ. ಆದಾಗ್ಯ 3ನೇ ಎದುರುದರರು ತಮ್ಮ ಕಾರ್ಯಾ ವ್ಯಾಪ್ತಿಯಲ್ಲಿ ನಿಯಮಾನುಸಾರ ಕಾರ್ಯನಿರ್ವಹಿಸಿದ್ದಾರೆ. ದೂರಿನಲ್ಲಿ ತಿಳಿಸಿರುವ ವಾಹನಗಳ ಪಟ್ಟಿಯನ್ನು ಪರಿಶೀಲಿಸಲಾಗಿ ಸದರಿ ಪಟ್ಟಿಯಲ್ಲಿರುವ ಖಾಸಗಿ ಬಸ್‌ಗಳು ಪರವಾನಗಿ ಇಲ್ಲದೆ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸಂಚರಿಸುತ್ತಿರುವ ಕುರಿತು ತೆಗೆದುಕೊಂಡಿರುವ ಕ್ರಮದ ಬಗ್ಗೆ ವರದಿಯನ್ನು ಸಲ್ಲಿಸಲು ಎಲ್ಲಾ ಹಿರಿಯ ಮೋಟಾರ್ ವಾಹನ ನಿರೀಕ್ಷಕರಿಗೆ ದಿ: 30.9.2015 ರಂದು ಮೆಮೋ ನೀಡಲಾಗಿದೆ. ಪರವಾನಿಗೆ ಇಲ್ಲದೆ ಸಂಚರಿಸುತ್ತಿರುವ ವಾಹನಗಳ ತಪಾಸಣೆ ಮಾಡಿ ಕ್ರಮಕೈಗೊಳ್ಳಲು ದಿ: 2.11.2015 ರಂದು ಅಧಿಕೃತ ಜ್ಞಾಪನ ಪತ್ರ ಮೂಖಾಂತರ ಆದೇಶಿಸಿರುತ್ತಾರೆ. ಹಿರಿಯ ಮೋಟಾರು ವಾಹನ

ನಿರೀಕ್ಷಕರುಗಳು ಅನಧಿಕೃತವಾಗಿ ಸಂಚರಿಸುತ್ತಿರುವ ವಾಹನಗಳ ತನಿಖಾ ವರದಿಗಳನ್ನು ನೀಡಿ ವಾಹನಗಳನ್ನು ಜಪ್ತಿಗೊಳಿಸಿದ್ದಾರೆ. ಸದರಿ ವಾಹನಗಳ ವಿರುದ್ಧ ಕ್ರಮ ಕೈಗೊಂಡು ರಾಜಿ ದಂಡವನ್ನು ವಸೂಲಿ ಮಾಡಲಾಗಿದೆ. ಅಲ್ಲದೆ ಇಂತಹ ವಾಹನಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಕಳ್ಳಾಟಿಕೆಯಿಂದ ಸಂಚರಿಸುವ ವಾಹನಗಳ ವಿರುದ್ಧ ಸೂಕ್ತ ಕ್ರಮ ಜರುಗಿಸಲು ಕ್ರಮ ಕೈಗೊಳ್ಳಲಾಗಿದೆ. ಇದಲ್ಲದೆ ದಿನ ನಿತ್ಯ ಈ ರೀತಿ ನಿಯಮ ಉಲ್ಲಂಘಿಸಿದ ವಾಹನಗಳನ್ನು ಜಪ್ತಿ ಮಾಡಲಾಗಿದ್ದು, ಅದು ದಿ: 3.11.2015 ರಂದು 300 ಹಾಗೂ 4.11.2015 ರಂದು 750 ಖಾಸಗಿ ಬಸ್‌ಗಳು ಸೇರಿದಂತೆ ವಿವಿಧ ವಾಹನಗಳನ್ನು ಜಪ್ತು ಮಾಡಲಾಗಿದೆ. ಆದ್ದರಿಂದ ದೂರಿನಲ್ಲಿ ಆಪಾದಿಸಿರುವ ಅಂಶಗಳ ಮೇಲೆ ಎದುರುದಾರರು ಮೊದಲೇ ಕ್ರಮ ಕೈಗೊಂಡಿರುವುದರಿಂದ ಈ ದೂರಿನಲ್ಲಿ ಯಾವುದೇ ಸತ್ಯಾಂಶವಿರುವುದಿಲ್ಲ. ಆದ್ದರಿಂದ ದೂರನ್ನು ವಜಾಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

7. ಸದರಿ ಆಕ್ಷೇಪಣೆಯನ್ನು ದೂರುದಾರರಿಗೆ ಕಳುಹಿಸಿ ಅವರದಿಂದ ಪ್ರತ್ಯುತ್ತರವನ್ನು ಕೇಳಲಾಯಿತು. ಸದರಿ ಪ್ರತ್ಯುತ್ತರದಲ್ಲಿ, ಎದುರುದಾರರು ಸರ್ಕಾರಿ ನೌಕರರಾಗಿದ್ದು, ಸಂಬಂಧಿಸಿದ ಕಛೇರಿಯು ಸಂಪೂರ್ಣ ಮಾಹಿತಿ ಅವರಿಗೆ ಇರುತ್ತದೆ. ಆದರೆ ತಾನೊಬ್ಬ ಸಾಮಾನ್ಯ ನಾಗರೀಕನಾಗಿದ್ದು, ತನಗೆ ಎದುರುದಾರರ ಕಛೇರಿಯ ಅಂಕಿ ಸಂಖ್ಯೆಗಳ ಮಾಹಿತಿ ಇರುವುದಿಲ್ಲ ಹೀಗಾಗಿ ಎದುರುದಾರರು ತಮ್ಮ ಕಛೇರಿಯ ಸೂಕ್ತ ಮಾಹಿತಿ ನೀಡದೆ ಅಸ್ಪಷ್ಟ ಹಾಗೂ ಅರ್ಧಂಬರ್ಧ ಮಾಹಿತಿ ನೀಡಿದ್ದಾರೆ. ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದ್ದಾರೆ.

**8. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:**

"ಎದುರುದಾರರ ನಂ; 3 ರವರು ತಮ್ಮ ಕಛೇರಿಗೆ ಸಂಬಂಧಪಟ್ಟಂತೆ ವಾಹನ ತಪಾಸಣಾ ತಂಡಗಳ ರಚನೆ, ಅನಧಿಕೃತ ವಾಹನಗಳಿಗೆ ದಂಡವಿಧಿಸುವಿಕೆ,

ಅನಧಿಕೃತ ವಾಹನಗಳನ್ನು ಮುಟ್ಟುಗೋಲು ಹಾಕಿಕೊಳ್ಳುವಿಕೆ, ಪರವಾನಿಗೆ ಉಲ್ಲಂಘಿಸಿದ ವಾಹನಗಳಿಗೆ ದಂಡವಿಧಿಸುವಿಕೆ ಹಾಗೂ ತಾವು ಯಾವ ಖಾಸಗಿ ವಾಹನಗಳ ತಪಾಸಣೆ ಮಾಡಿದ ಬಗ್ಗೆ ಫೋಟೋ ಸಹಿತ, ಅಂಕಿ ಸಂಖ್ಯೆ ಸಹಿತ ಮಾಹಿತಿ ನೀಡಿದ್ದಾರೆ. ಆದರೆ, ದೂರುದಾರರ ಪ್ರಕಾರ ದಿನಂಪ್ರತಿ 2000ಕ್ಕೂ ಅಧಿಕ ಖಾಸಗಿ ವಾಹನಗಳು ಎದುರುದಾರರ ಕಛೇರಿ ವ್ಯಾಪ್ತಿಯಲ್ಲಿ ಸಂಚರಿಸುತ್ತಿದ್ದು, ಅದರಲ್ಲಿ ನಾಮ ಮಾತ್ರ ಕೆಲವು ವಾಹನಗಳಿಗೆ ದಂಡ ವಿಧಿಸಿದ ಬಗ್ಗೆ, ಮುಟ್ಟುಗೋಲು ಹಾಕಿಕೊಂಡ ಬಗ್ಗೆ, ಕೆಲವೇ ದಿನಗಳ ವರಗೆ ಅಧಿಕಾರಿಗಳನ್ನು ವಾಹನ ತಪಾಸಣೆಗೆ ನಿಯೋಜಿಸಿದ ಬಗ್ಗೆ ದಾಖಲೆಗಳನ್ನು ನೀಡಿದ್ದು ಕಂಡುಬರುತ್ತದೆ. ಆದ್ದರಿಂದ ಎದುರುದಾರರು ನೀಡಿದ ಮಾಹಿತಿಯು ಪೂರ್ಣ ಒಳಗೊಂಡಿರುವುದಿಲ್ಲ ಹಾಗೂ ಎದುರುದಾರರು ಸಂಪೂರ್ಣ ಅಕ್ರಮವನ್ನು ತಡೆಗಟ್ಟಲು ವಿಫಲರಾಗಿರುತ್ತಾರೆಂದು ಕಂಡುಬರುತ್ತದೆ.

ಎದುರುದಾರರ ನಂ; 1 ಮತ್ತು 2 ರವರು ತಮ್ಮ ಹೋಣೆಯನ್ನು ಇನ್ನೊಬ್ಬ ಎದುರುದಾರ ಮೇಲೆ ಹೊರಿಸಲು ಪ್ರಯತ್ನಿಸಿರುವುದು ಕಂಡುಬರುತ್ತದೆ. ಎದುರುದಾರರೆಲ್ಲರೂ ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬರುವ ತಮ್ಮ ಕಚೇರಿಗೆ ಸಂಬಂಧಿಸಿದ ಕೆಲಸ ನಿರ್ವಹಿಸಲು ಹೊಣೆಗಾರರಾಗಿರುತ್ತಾರೆ.

ಎದುರುದಾರರ–1 ರವರು ನೀಡಿದ ಅಂಕಿ ಸಂಖ್ಯೆಗಳು ಕೇವಲ ಇಲಾಖೆಯ ಹಾಗೂ ಸಾರ್ವಜನಿಕರಿಗೆ ನಾಮ ಮಾತ್ರ ತೋರಿಸಲು ನೀಡಿದ ಅಂಕಿ ಸಂಖ್ಯೆಗಳೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ. ದಿನಕ್ಕೆ ರಾಷ್ಟ್ರೀಯ ಹೆದ್ದಾರಿ ನಂ: 4ರಲ್ಲಿ ಅಂದಾಜು 2000ವಾಹನಗಳು ಸಂಚರಿಸಿದರೆ ಅದರಲ್ಲಿ 2013–14, 2014–15ನೇ ಸಾಲಿನಲ್ಲಿ ವಾಹನಗಳಿಗೆ ದಂಡವಿಧಿಸಿದ್ದು, ಪರವಾನಿಗೆ ರದ್ದು ಗೊಳಿಸಿದ್ದು, ವಾಹನಗಳನ್ನು ಮುಟ್ಟುಗೊಲು ಹಾಕಿಕೊಂಡಿದ್ದು ಕೇವಲ ಬೆರೆಳೆಣಿಕೆಯಷ್ಟು ಮಾತ್ರ. ಆದ್ದರಿಂದ ರಾಷ್ಟ್ರೀಯ ಹೆದ್ದಾರಿ ನಂ: 4ರಲ್ಲಿ ಬರುವ ಎದುರುದಾರರ ಕಛೇರಿ ವ್ಯಾಪ್ತಿಯಲ್ಲಿ

ವಾಹನಗಳು ಅನಧಿಕೃತವಾಗಿ ಸಂಚರಿಸಲು 1 ರಿಂದ 3ನೇ ಎದುರುದಾರರ ಕರ್ತವ್ಯಲೋಪ ಮೇಲ್ನೋಟಕ್ಕೆ ಕಂಡುಬರುತ್ತದೆ."

9. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು 1 ರಿಂದ 3ನೇ ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರು ತಮ್ಮ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

10. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 1 ರಿಂದ 3ನೇ ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

11. ಅದಲ್ಲದೆ 1 ರಿಂದ 3ನೇ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ 1ನೇ ಎದುರುದಾರರು ದಿನಾಂಕ:30/04/2016ರಂದು ಈಗಾಗಲೇ ನಿವೃತ್ತಿ ಹೊಂದಿರುವುದರಿಂದ, **ಕೆಸಿಎಸ್‌ಆರ್ ನಿಯಮ 214(2)(ಬಿ)(i)ರ ಅಡಿ ಇಲಾಖಾ ವಿಚಾರಣೆಗೆ ಅನುಮತಿಯನ್ನು** ನೀಡಿ ಹಾಗೂ 1 ರಿಂದ 3ನೇ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸ ಬೇಕೆಂದೂ ಕೋರಿದೆ.

12. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ, ಏಕೆಂದರೆ 1ನೇ ಎದುರುದಾರರು ದಿನಾಂಕ:30/04/16ರಂದು ನಿವೃತ್ತಿ ಹೊಂದಿದ್ದಾರೆ.

**(ನ್ಯಾಯಾಮೂರ್ತಿ ಸುಬಾಷ್ ಬಿ ಆಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ.**